# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | 469 |
| **ಸದಸ್ಯರ ಹೆಸರು** | ಶ್ರೀ ಎಸ್.ರವಿ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| **ಉತ್ತರಿಸಬೇಕಾದ ದಿನಾಂಕ** | 21.02.2022 |
| **ಉತ್ತರಿಸಬೇಕಾದ ಸಚಿವರು** | ಮಾನ್ಯ ಉನ್ನತ ಶಿಕ್ಷಣ, ಐಟಿ ಬಿಟಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ, ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು. |

**ಪ್ರಶ್ನೆ**

ಅ) ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಯಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಆಧಾರಿತ ಎಷ್ಟು ಸಂಸ್ಥೆಗಳು ಕಾರ್ಯನಿರತವಾಗಿವೆ (ವಿವರ ನೀಡುವುದು) ಈ ಸಂಸ್ಥೆಗಳಲ್ಲಿ ಸರೋಜಿನಿಮಹಿಷಿ ವರದಿಯಂತೆ ಸ್ಥಳೀಯರಿಗೆ ಉದ್ಯೋಗಾವಕಾಶಗಳನ್ನು ನೀಡಲಾಗುತ್ತಿದೆಯೇ; ಇಲ್ಲದಿದ್ದಲ್ಲಿ, ಸರ್ಕಾರವು ಈ ಸಂಬಂಧ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು)

**ಉತ್ತರ**

ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಸರ್ಕಾರದಿಂದ ಪ್ರೋತ್ಸಾಹದಾಯಕ ರಿಯಾಯಿತಿಗಳನ್ನು ಮತ್ತು ಸೌಲಭ್ಯಗಳನ್ನು ಪಡೆಯಲು ಇಚ್ಛಿಸಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಆಧಾರಿತ ಈ ಕೆಳಕಂಡ ಕಂಪನಿಗಳು ಇಲಾಖೆಯಲ್ಲಿ ನೋಂದಣಿ ಮಾಡಿಕೊಂಡಿರುತ್ತವೆ.

**<u>ಬೆಂಗಳೂರು ಗ್ರಾಮಾಂತರ</u>**

| ಮಾಹಿತಿ ತಂತ್ರಜ್ಞಾನ ಕಂಪನಿಗಳು | ಜೈವಿಕ ತಂತ್ರಜ್ಞಾನ ಕಂಪನಿಗಳು |
|---|---|
| ಮೆ|| ಎಸ್ ಎಲ್ ಕೆ ಗ್ಲೋಬಲ್ ಸಲ್ಯೂಷನ್ಸ್ ಪ್ರೈ ಲಿ. | ಮೆ|| ದಿ ಬೆಂಗಳೂರು ಸೇಲ್ಸ್ ಕಾರ್ಪೊರೇಷನ್ |
| ಮೆ|| ಎಸ್.ಎಲ್.ಕೆ ಸಾಫ್ಟವೇರ್ ಸರ್ವೀಸ್ ಪ್ರೈ ಲಿ. | ಮೆ|| ಹೂಗುಗ್ವೆ ಬಯೋಟೆಕ್ |
| ಮೆ|| ಅಮೀನ್ ಪ್ರಾಪಟೀಸ್ ಎಲ್‌ಎಲ್‌ಪಿ. | - |

**<u>ರಾಮನಗರ</u>**

| ಮಾಹಿತಿ ತಂತ್ರಜ್ಞಾನ ಕಂಪನಿಗಳು | ಜೈವಿಕ ತಂತ್ರಜ್ಞಾನ ಕಂಪನಿಗಳು |
|---|---|
| ಮೆ|| ಸ್ಮಾರ್ಟ್ ಐಟಿ ಸಲ್ಯೂಷನ್ಸ್ ಪ್ರೈ ಲಿ. | ಮೆ|| ಜಿಯೋ ಬಯೋ ಟೆಕ್ನಾಲಜೀಸ್ ಇಂಡಿಯಾ ಪ್ರೈ ಲಿ |
| ಮೆ|| ಟರ್ನಿಂಗ್ ಪಾಯಿಂಗ್ ಸಾಫ್ಟವೇರ್ ಸಲ್ಯೂಷನ್ಸ್ (ಪಿ) ಲಿ | - |
| ಮೆ|| ಮೈಕ್ರೋಹಾರ್ಡ್ ಇನ್ನೋಟೆಕ್ | - |
| ಮೆ|| ಪೀಕ್ XV ನೆಟ್‌ವರ್ಕ್ಸ್ (ಪಿ) ಲಿ | - |
| ಮೆ|| ರಮೇಶ್ ಎಂಟರ್ ಪ್ರೈಸಸ್ | - |
| ಮೆ|| ಎಸ್.ಎಲ್.ವಿ ಟೆಕ್‌ಪಾರ್ಕ್ | - |
| ಮೆ|| NXTGEN ಡಾಟಾ ಸೆಂಟರ್ ಮತ್ತು ಕ್ಲೌಡ್ ಟೆಕ್ನಾಲಜೀಸ್ ಪ್ರೈ ಲಿ | - |

ಈ ಕಂಪನಿಗಳಲ್ಲಿ ಸ್ಥಳೀಯರಿಗೆ ಅವರ ವಿದ್ಯಾರ್ಹತೆ ಮೇರೆಗೆ ಉದ್ಯೋಗ ನೀಡಲಾಗುತ್ತಿದೆ.

| | |
|---|---|
| ಆ) ಬೆಂಗಳೂರು ನಗರ ಹೊರತುಪಡಿಸಿ ರಾಜ್ಯದ ಇತರೆ ಜಿಲ್ಲೆಗಳಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕೇಂದ್ರಗಳನ್ನು ಸ್ಥಾಪನೆ ಮಾಡಲು ಸರ್ಕಾರ ಉದ್ದೇಶಿಸಿದೆಯೇ;<br>ಉದ್ದೇಶಿಸಿದ್ದಲ್ಲಿ, ಯಾವ ಯಾವ ಪ್ರದೇಶಗಳಲ್ಲಿ ಈ ಕೇಂದ್ರಗಳನ್ನು ತೆರೆಯಲಾಗುವುದು; (ವಿವರ ನೀಡುವುದು) | ಬೆಂಗಳೂರು ನಗರ ಹೊರತುಪಡಿಸಿ ರಾಜ್ಯದ ಇತರೆ ಜಿಲ್ಲೆಗಳಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕೇಂದ್ರಗಳನ್ನು ಸ್ಥಾಪನೆ ಮಾಡುವಂತಹ ಯಾವುದೇ ಪ್ರಸ್ತಾವನೆಗಳು ಪ್ರಸ್ತುತ ನಿರ್ದೇಶನಾಲಯದಲ್ಲಿ ಇರುವುದಿಲ್ಲ. ಆದಾಗ್ಯೂ ಬೆಂಗಳೂರು ನಗರ ಹೊರತುಪಡಿಸಿ, ರಾಜ್ಯದ ಇತರೆ ಭಾಗಗಳಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕೇಂದ್ರ/ಪಾರ್ಕ್/ಕಂಪನಿಗಳನ್ನು ಸ್ಥಾಪನೆ ಮಾಡುವವರಿಗೆ ಸರ್ಕಾರವು ಈ ಕೆಳಕಂಡ ಸವಲತ್ತುಗಳನ್ನು ಒದಗಿಸುತ್ತಿದೆ. |
| ಇ) ಬೆಂಗಳೂರು ನಗರ ಹೊರತುಪಡಿಸಿ ರಾಜ್ಯದ ಇತರೆ ಭಾಗಗಳಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕೇಂದ್ರಗಳನ್ನು ಸ್ಥಾಪನೆ ಮಾಡಲು ಖಾಸಗಿ ಕಂಪನಿಗಳಿಗೆ ಸರ್ಕಾರವು ಒದಗಿಸುತ್ತಿರುವ ಸವಲತ್ತುಗಳೇನು? (ವಿವರ ನೀಡುವುದು) | **<u>ಮಾಹಿತಿ ತಂತ್ರಜ್ಞಾನ ವಲಯ</u>**<br>• ವಲಯ 3ಕ್ಕೆ ಹೊರತಾದ ಪ್ರದೇಶದಲ್ಲಿ ಮಾಹಿತಿ ತಂತ್ರಜ್ಞಾನ ವಲಯ/ ಕ್ಲಸ್ಟರ್ ಸ್ಥಾಪನೆಗೆ ರೂ. 3.00 (ಮೂರು) ಕೋಟಿಗಳವರೆಗೂ ಹಣಕಾಸಿನ ನೆರವು<br>• ಪ್ರತಿ ಚದರ ಅಡಿಗೆ ರೂ. 10ರ ದರದಲ್ಲಿ ಗರಿಷ್ಠ ರೂ. 3.00 (ಮೂರು) ಲಕ್ಷದವರೆಗೆ ಗುತ್ತಿಗೆ/ಬಾಡಿಗೆ ಮರುಪಾವತಿ.<br>• ಘಟಕಗಳಿಗೆ ವಿದ್ಯುತ್ ದರಗಳಲ್ಲಿ ರಿಯಾಯಿತಿ.<br>• ವಲಯ 3ಕ್ಕೆ ಹೊರತಾದ ಪ್ರದೇಶದಲ್ಲಿ ಸಂಘಟನಾ ಕಾರ್ಯಸ್ಥಾನಗಳು (ಕೋವರ್ಕಿಂಗ್ ಸ್ಪೇಸ್) ಬಳಕೆಗೆ ಸಂಪೂರ್ಣ ಸನ್ನದ್ಧಗೊಂಡ (ಪ್ಲಗ್ ಅಂಡ್ ಪ್ಲೇ) ಮೂಲಸೌಕರ್ಯಗಳಿಗಾಗಿ ರೂ. 2.00(ಎರಡು) ಕೋಟಿಗಳ ವರೆಗೆ ಹಣಕಾಸು ನೆರವು<br>• ಮೈಸೂರು, ಹುಬ್ಬಳ್ಳಿ, ಧಾರವಾಡ ಹಾಗೂ ಮಂಗಳೂರಿನಲ್ಲಿ ಶೇ. 75ರಷ್ಟು ಮುದ್ರಾಂಕ ಶುಲ್ಕ ವಿನಾಯಿತಿ. ವಲಯ 3ಕ್ಕೆ ಹೊರತುಪಡಿಸಿ ಬೇರೆಲ್ಲಾ ವಲಯಗಳಲ್ಲಿ ಶೇ. 100ರಷ್ಟು ಮುದ್ರಾಂಕ ಶುಲ್ಕ ವಿನಾಯಿತಿ<br>**<u>ಜೈವಿಕ ತಂತ್ರಜ್ಞಾನ ವಲಯ</u>**<br>ಜೈವಿಕ ತಂತ್ರಜ್ಞಾನ ವಲಯಕ್ಕಾಗಿ ಸರ್ಕಾರವು ಪ್ರಕಟಿಸಿರುವ ಜೈವಿಕ ತಂತ್ರಜ್ಞಾನ ನೀತಿ 3.0ರಲ್ಲಿ ರಾಜ್ಯದಾದ್ಯಂತ ಸ್ಥಾಪಿಸುವ ಜೈವಿಕ ತಂತ್ರಜ್ಞಾನ ಕಂಪನಿಗಳಿಗೆ ಈ ಕೆಳಕಂಡ ಹಣಕಾಸಿನ ಪ್ರೋತ್ಸಾಹಕಗಳು ಹಾಗೂ ರಿಯಾಯಿತಿಗಳನ್ನು ಒದಗಿಸಲಾಗುವುದು.<br>• ಉಪಘಟಕಕ್ಕೆ ಸಬ್ಸಿಡಿ.<br>• ರೂ. 1.00(ಒಂದು) ಲಕ್ಷದವರೆಗೆ ಯೋಜನೆಯ ಕಾರ್ಯ ಯೋಜನೆ ತಯಾರಿಕೆಯ ವೆಚ್ಚದ ಮರುಪಾವತಿ.<br>• ಸಂಶೋಧನಾಭಿವೃದ್ಧಿ ಘಟಕಗಳಿಗೆ ವಿದ್ಯುತ್ ದರಗಳಲ್ಲಿ ರಿಯಾಯಿತಿ.<br>• ತಂತ್ರಜ್ಞಾನ ಉನ್ನತೀಕರಣಕ್ಕಾಗಿ ಪಡೆದುಕೊಂಡ ಗರಿಷ್ಠ ರೂ.50.00 (ಐವತ್ತು) ಲಕ್ಷಗಳವರೆಗಿನ ಸಾಲದ ಬಡ್ಡಿಗೆ ಶೇ.6ರಷ್ಟು ಸಬ್ಸಿಡಿ.<br>• ISO/BIS/NABL/GMP/GLP ಪ್ರಮಾಣೀಕರಣಗಳನ್ನು ಪಡೆಯಲು ಆರ್ಥಿಕ ಸಹಾಯ.<br>• ಭಾರತದಲ್ಲಿ ಮತ್ತು ವಿದೇಶದಲ್ಲಿ ಪೇಟೆಂಟ್ ನೋಂದಣಿಗಾಗಿ ಆರ್ಥಿಕ ಸಹಾಯ.<br>• ಅಂತರಾಷ್ಟ್ರೀಯ ಮಾರ್ಕೆಟಿಂಗ್ ಪ್ರಚುರ ಕಾರ್ಯಕ್ಕೆಗೊಳ್ಳಲು ಮಾರ್ಕೆಟಿಂಗ್ ಪ್ರೋತ್ಸಾಹಕ. |

ಐಟಿಬಿಟಿ 16 ಎಲ್ ಸಿಎಂ 2022

**(ಡಾ|| ಸಿ.ಎನ್. ಅಶ್ವಥ್ ನಾರಾಯಣ್)**
ಉನ್ನತ ಶಿಕ್ಷಣ, ಐಟಿ-ಬಿಟಿ, ವಿಜ್ಞಾನ ಮತ್ತು ತಂತ್ರಜ್ಞಾನ,
ವಿದ್ಯುನ್ಮಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಸಚಿವರು.